ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ತಾವು ಮಂಗಳೂರು ರಾಸಾಯನಿಕ ಗೊಬ್ಬರದ. ಕಾರ್ಖಾನೆಗೆ 20 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದೀರಿ. ಇದನ್ನು ಯಾವ ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆ ಅನ್ನುವ ವಿವರವನ್ನು ತಿಳಿಸುತ್ತೀರಾ ?

Sri M. RAJASHEKHARA MURTHY.—Those details are not with me.

Sri D. B. KALMANKAR.—May I know whether any report is given by Mr. Poonacha? If so, whether it will be placed on the Table ?

Sri M. RAJASHEKHARA MURTHY.—There is no such report.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಈ ಫರ್ಟಿಲೈಸರ್ಸ್ ಕಂಪನಿಯನ್ನು ಯಾವ ಬೇಸಿಸ್ ಮೇಲೆ ತೆರೆಯುತ್ತೀರಿ ? ನಮ್ಮ ದೇಶದಲ್ಲಿ ಅದಕ್ಕೆ ಬೇಕಾದಂಥ ಎಲ್ಲಾ ರಾಮೇಟೇರಿಯಲ್ಸ್ ಸಿಕ್ಕುತ್ತದೆಯೇ ? ಅದಕ್ಕೆ ಬೇಕಾದಂಥ ರಾಮೇಟೇರಿಯಲ್ಸ್‌ನ್ನು ಇಂಪೋರ್ಟ್ ಮಾಡಿಕೊಳ್ಳಬೇಡವೇ ?

Sri M. RAJASHEKHARA MURTHY.—This is naphtha based. Permission to import is already there and the Government of India is going to allow it.

Reservation of Funds for the welfare of Scheduled Castes and Scheduled Tribes by Taluk Development Boards.

93. Sri M. H. JAYAPRAKASH NARAYAN (Sirsi).—

Will the Minister for Development be pleased to state :—

(*a*) the number of Taluk Development Boards in the State and their income during the year 1969–70 ;

(*b*) out of this, Taluk Development Boards which have reserved 18 per cent of their income under various Plan and Non–plan development works according to Government instruction for welfare of S.Cs. and S.Ts.;

(*c*) the amount so reserved, the amount spent and the amount lapsed ;

(*d*) the Taluk Development Boards which have not reserved 18 per cent of their income as per the above instruction for the developmental works in respect of S. Cs. and S. Ts ; if not, the reasons therefor ;

(*e*) the action taken by the Government against the Officers who have violated the above instructions of Government ?

Sri B. L. GOWDA (Deputy Minister for Co-operation).—

(*a*) 175 Development Boards Rs. 5,28,60,590–38.

(*b*) All Development Boards.

(*c*) Amount reserved...Rs. 21,12,461–00.
Amount spent...Rs. 12,64,270–16.
Amount lapsed...Rs. 8,48,190–84.

(*d*) and (*e*) Do not arise in view of reply to clause (*b*).

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ತಾವು (ಅ)ಗೆ ಉತ್ತರವಾಗಿ 5,28,60,590–38 ಪೈಸೇ ಅಷ್ಟು ಹಣ ಎಲ್ಲಾ ತಾಲ್ಲೂಕು ಅಭಿವೃದ್ಧಿ ಮಂಡಲಗಳ ಅದಾಯ ಎಂದು ಹೇಳಿದ್ದೀರಿ. ಹಾಗಾದರೆ ಅದರಲ್ಲಿ 18 ಪರ್ಸೆಂಟು ಹಣವನ್ನು ಮೀಸಲಾಗಿಡುವ ಹಾಗಿದ್ದರೆ, ಎಲ್ಲಾ ತಾಲ್ಲೂಕು ಅಭಿವೃದ್ಧಿ ಮಂಡಲಗಳಿಗೂ ಮೀಸಲು ಹಣ 21,12,461–00 ರೂಪಾಯಿಗಳು ಇಟ್ಟಿರುವುದು ಸರಿಹೋಗುತ್ತದೆಯೇ? ಒಟ್ಟು ಆದಾಯದ ಪ್ರಕಾರ ಎಷ್ಟು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡುಗಳಿಗೆ ಈ 18 ಪರ್ಸೆಂಟು ಇಟ್ಟಿದ್ದಾರೆ? ಎಷ್ಟು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳಿಗೆ ಇಟ್ಟಿಲ್ಲ ಎನ್ನುವುದನ್ನು ಖಚಿತವಾಗಿ ಹೇಳುತ್ತೀರಾ?

†ಶ್ರೀ ಬಿ. ಎಲ್. ಗೌಡ.—ಮಾನ್ಯ ಸ್ನೇಹಿತರ ಪ್ರಶ್ನೆ ಎಲ್ಲಾ ತಾಲ್ಲೂಕು ಅಭಿವೃದ್ಧಿ ಮಂಡಲಗಳಿಗೂ ಒಟ್ಟು ಆದಾಯದಲ್ಲಿ ಶೇಖಡ 18 ಭಾಗ ಇಟ್ಟುಕೊಂಡಿದ್ದಾರೆ ಎಂದು ತಿಳಿದುಕೊಂಡಿದ್ದಾರೆ. ಆದರೆ ಪರಿಸ್ಥಿತಿ ಹಾಗಿಲ್ಲ. ಸ್ಕೂಲ್ ಬಿಲ್ಡಿಂಗ್ ಕಟ್ಟಿದರೆ, ಬಾವಿ ತೆಗೆಸಿದರೆ, ಆಸ್ಪತ್ರೆ ಮೆಂಟೈನ್ ಮಾಡಿದರೆ ವೈಯಕ್ತಿಕವಾಗಿ ಈ ಹಣವನ್ನು ಶೇಕಡ 18 ಪರ್ಸೆಂಟ್ ಅಷ್ಟು ಮೀಸಲಾಗಿಡುವುದಿಲ್ಲ. ಇಂಡಸ್ಟ್ರೀಸ್ ನಾಲ ಕೊಟ್ಟರೆ, ಬಾವಿಗೆ ನಾಲ ಕೊಟ್ಟರೆ ವೈಯಕ್ತಿಕವಾಗಿ ಎಲ್ಲೆಲ್ಲಿ ಲಾಭ ಬರುತ್ತದೋ ಅಂತಹ ನಂದರ್ಭಗಳಲ್ಲಿ ಶೇಕಡ 18 ಭಾಗದಷ್ಟು ಹಣವನ್ನು ಮೀಸಲಾಗಿಟ್ಟಿದೆ. ಆ ರೀತಿ 175 ತಾಲ್ಲೂಕು ಅಭಿವೃದ್ಧಿ ಮಂಡಲಗಳೂ ಮೀಸಲಾಗಿಟ್ಟಿವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಪ್ರತಿ ತಾಲ್ಲೂಕು ಅಭಿವೃದ್ಧಿ ಮಂಡಲಗಳೂ ಶೇಕಡ 18 ಭಾಗದಷ್ಟು ಹಣವನ್ನು ಮೀಸಲಾಗಿಟ್ಟಿಲ್ಲ. ವೈಯಕ್ತಿಕವಾಗಿ ಎಲ್ಲಿ ಲಾಭ ಬರುತ್ತದೊ ಅಂತಹ ಕಡೆ ಇಟ್ಟಿದ್ದಾರೆ ಎಂದು ಹೇಳುತ್ತೀರಿ. ನಿಮ್ಮ ವರ್ಗದವರಿಗೆ ಎಲ್ಲಾ ಬಾಬುಗಳಲ್ಲು ಸೌಕರ್ಯ ಮಾಡಿಕೊಡಲು 18 ಪರ್ಸೆಂಟು ಇಡಬೇಕು ಎಂದು ಸರ್ಕ್ಯುಲರ್ ಕಳುಹಿಸಿರುವುದನ್ನು ತೋರಿಸಿದರೆ ನೀವು ರಾಜೀನಾಮೆ ನೀಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ಇದರಲ್ಲಿ ರಾಜೀನಾಮೆ ನೀಡುವ ಪ್ರಸಂಗ ಏನೂ ಇಲ್ಲ. ನನ್ನಲ್ಲಿ ಪ್ರತಿಯೊಂದು ತಾಲ್ಲೂಕು ಅಭಿವೃದ್ಧಿ ಮಂಡಲಗಳ ಮಾಹಿತಿ ಇದೆ. ಮಾನ್ಯ ಸ್ನೇಹಿತರು ಯಾವ ನಂದರ್ಭದಲ್ಲಿ ಆ ರೀತಿ ನಡೆದಿದೆ ಎನ್ನುವುದನ್ನು ನನ್ನ ಗಮನಕ್ಕೆ ತಂದರೆ ಅವರ ಮೇಲೆ ಕ್ರಮ ತಗೆದು ಕೊಳ್ಳುತ್ತೇನೆ. ಅದಕ್ಕಾಗಿ ನಾವು ಏತಕ್ಕಾಗಿ ರಾಜೀನಾಮೆ ನೀಡಬೇಕು ಅನ್ನುವುದು ನನಗೆ ಗೊತ್ತಿಲ್ಲ.

Sri B. B. SAYANAK.—May I know the reason why this amount has lapsed?

Sri B. L. GOWDA.—It has not lapsed. We have yet six months to complete the financial year and the amount will be spent within that time.

ಶ್ರೀ ಎಚ್. ಪುಟ್ಟದಾಸ.—ಸ್ವಾಮಿ, ಈ ವರ್ಷದ ಬಡ್ಜೆಟ್‌ನಲ್ಲಿ ನಿಮ್ಮ ವರ್ಗದವರ ಅಭಿವೃದ್ಧಿಗಾಗಿ ಶೇಕಡ 18 ಪರ್ಸೆಂಟ್ ಅಷ್ಟು 31 ಮಾರ್ಚ್ ಒಳಗೆ ಖರ್ಚು ಮಾಡಬೇಕೆಂದು ಅಕೌಂಟ್‌ನಲ್ಲಿ ತೆಗೆದು ಇಟ್ಟು, ಅಂಥ ಹಣವನ್ನು ಖರ್ಚು ಮಾಡದೆ, ಇದರಲ್ಲಿ ಖರ್ಚು ಮಾಡಿದ್ದೇವೆ ಅಂತ ಫಿಗರ್ಸ್ ಕೊಟ್ಟಿರುವುದು ನಿಜವೇ?

ಶ್ರೀ ಬಿ. ಎಲ್. ಗೌಡ.—ಇದರಲ್ಲಿ ಖರ್ಚು ಮಾಡದೆ ಬೇರೆ ರೀತಿಯಾಗಿ ಖರ್ಚು ಮಾಡಿದ್ದೇವೆ ಅಂತ ನಿದರ್ಶನಗಳನ್ನು ನನ್ನ ಗಮನಕ್ಕೆ ತಂದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ನಾಗಪ್ಪ.—ತಾವು (ಬಿ)ಗೆ ಉತ್ತರವಾಗಿ ಆಲ್ ಡೆವಲಪ್‌ಮೆಂಟ್ ಬೋರ್ಡ್ಸ್ ಎಂದು ಹೇಳಿದ್ದೀರಿ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಅವರ ಪುರೋಭಿವೃದ್ಧಿಗಾಗಿ 18 ಪರ್ಸೆಂಟು ರಿಸರ್ವ್ ಮಾಡಬೇಕೆಂದು ಸರ್ಕಾರದ ಆದೇಶ ಇದೆ. ಅದರಲ್ಲಿ ಯಾವ ಯಾವ ಖಾತೆಗಳು ಸೇರಿವೆ ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಬಿ. ಎಲ್. ಗೌಡ.—ವೆಲ್‌ಫೇರ್ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ನಲ್ಲಿ 18 ಪರ್ಸೆಂಟ್ ಮೀಸಲಾಗಿಡಬೇಕು ಎಂದು ಸೂಚನೆಯನ್ನು ಕೊಟ್ಟಿಲ್ಲ. ವೈಯಕ್ತಿಕ ಲಾಭ ದೊರಯಬಹುದಾದ ಯೋಜನೆಗಳಲ್ಲಿ ಮಾತ್ರ ಈ ತರಹ 18 ಪರ್ಸೆಂಟ್ ಮೀಸಲಾಗಿಡಬೇಕೆಂದು ಆದೇಶಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ. - 1969-70ನೇ ಸಾಲಿಗೆ 8,48,190 ರೂಪಾಯಿ ಲ್ಯಾಪ್ಸ್ ಆಗಿದೆ ಎಂದು ತಿಳಿಸಿದ್ದಾರೆ. ಯಾವ ಯಾವ ಬಾಬುಗಳಲ್ಲಿ ಹಣ ಉಳಿತಾಯವಾಗಿದೆ ಮತ್ತು ಹಾಗೆ ಉಳಿತಾಯವಾಗುವುದಕ್ಕೆ ಕಾರಣಗಳೇನು ಎನ್ನುವುದನ್ನು ತಾಲ್ಲೂಕು ಬೋರ್ಡುಗಳವರು ಸರ್ಕಾರಕ್ಕೆ ತಿಳಿಸಿದ್ದಾರೆಯೇ ಹೇಗೆ ?

ಶ್ರೀ ಬಿ. ಎಲ್. ಗೌಡ.—ಯಾವ ಯಾವ ತಾಲ್ಲೂಕು ಬೋರ್ಡುಗಳಲ್ಲಿ ಲ್ಯಾಪ್ಸ್ ಆಗಿದೆ ಎನ್ನುವ ಅಂಕಿ ಅಂಶಗಳು ನನ್ನ ಮುಂದೆ ಇಲ್ಲ. ಬಜೆಟ್ಟಿನಲ್ಲಿ ತೋರಿಸುವ ಹಣವನ್ನೆಲ್ಲ ಖರ್ಚು ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ.

Sri D. B. KALMANKAR.—I wish to know whether this 18 per cent of the income meant to be spent for the welfare of S.Cs. and S.Ts., is spent exclusively for schemes for the welfare of S.Cs. and S.Ts. or other programmes also taken into consideration out of this 18 per cent income?

Sri B. L. GOWDA.—I do not think they will be spent for any other purpose. It is meant exclusively for their individual benefits and that reserved income will accrue for the welfare of S.Cs. and S.Ts.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಎಷ್ಟು ಹಣ ನಿಗದಿ ಮಾಡಲಾಗಿದೆಯೋ ಅದರಲ್ಲಿ ಅರ್ಧ ಮಾತ್ರ ಖರ್ಚು ಮಾಡತಕ್ಕ ನೀತಿ ಸರ್ಕಾರದಲ್ಲಿ ಮತ್ತು ತಾಲ್ಲೂಕು ಬೋರ್ಡ್‌ಗಳಲ್ಲಿದೆಯೇ ? ನಿಗದಿ ಮಾಡಲಾಗಿರುವ ಹಣವನ್ನು ಗೊತ್ತಾದ ಕಾರ್ಯಕ್ರಮಗಳಿಗೆ ಖರ್ಚು ಮಾಡುವುದಕ್ಕೆ ಆದೇಶ ಕೊಟ್ಟು ಲ್ಯಾಪ್ಸ್ ಆಗದಂತೆ ನೋಡಿಕೊಳ್ಳುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸ್ನೇಹಿತರು ಹೇಳಿದುದನ್ನು ಒಪ್ಪಿಕೊಳ್ಳುತ್ತೇನೆ. ಸಮಾಜದ ಹಿಂದುಳಿದ ವರ್ಗಗಳವರಿಗೆ ಸಂಬಂಧಪಟ್ಟಂಥ ಕಾರ್ಯಕ್ರಮಗಳನ್ನು ಯಾವ ಅಭಿವೃದ್ಧಿ ಮಂಡಲಿಗಳು ಮಾಡುವುದಿಲ್ಲವೋ ಅವರ ಬಗ್ಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುವಂತೆ ಆದೇಶ ಕೊಡುತ್ತೇವೆ.

Mr. DEPUTY SPEAKER.—I hold over Question No. 146 by Sri D. B. Kalmankar, the Hon. Chief Minister, who is in charge of the work of the Minister for Parliamentary Affairs, is not in station.

Sri K. H. PATIL.—There is joint responsibility. Are not the other Ministers responsible enough to answer the question ? When it suits the Government, the question will be held over. When an hon. Member is absent and when his question is called, that question will not be held over. When a similar request for holding over a question by a Member who is not present, is made, it will not be complied. We cannot understand why this treatment is given when a Minister is absent.

Sri BOLA RAGHURAMA SETTY.—The whole House cannot wait for the pleasure of the Minister.

Bifurcation of Huzur Treasury

167. Sri T. R. SHAMANNA (Fort).—

Will the Minister for Finance, Planning and Youth Welfare be pleased to state :—

(*a*) whether it is a fact that the Government has decided to bifurcate the present Huzur Treasury ;